# ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ, ಮಹಾರಾಷ್ಟ್ರ

*[ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ಭಾ. ಕೃ. ಅ. ಪ), ಕೃಷಿ ಮಂತ್ರಾಲಯ, ಭಾರತ ಸರ್ಕಾರ]*

## ಹತ್ತಿ ಬೆಳೆಯ ಸಾಪ್ತಾಹಿಕ ಸಲಹೆ, 24 ರಿಂದ 30 ಸೆಪ್ಟೆಂಬರ್ 2026 ರ ಅವಧಿಗೆ

*"ಈ ಸಲಹೆಯು ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳಿಂದ ಸ್ವೀಕರಿಸಿದ ಮಾಹಿತಿಯನ್ನು ಆಧರಿಸಿದೆ"*

### ಅ. ಮಣ್ಣಿನ ಆರೋಗ್ಯ, ಪೋಷಣೆ, ಹಾಗೂ ಕೀಟ ಮತ್ತು ರೋಗ ನಿರ್ವಹಣೆಯ ಕುರಿತಾದ ಸಾಮಾನ್ಯ ಸಲಹೆ

ಹೆಚ್ಚಿನ ಹತ್ತಿ ಇಳುವರಿಯು ಸಮತೋಲಿತ ಮಣ್ಣಿನ ಪೋಷಣೆ, ನೀರಿನ ನಿರ್ವಹಣೆ ಮತ್ತು ಪೂರ್ವಭಾವಿ ನಿರೀಕ್ಷಣೆ ಆಧಾರಿತ ಕೀಟ ಮತ್ತು ರೋಗ ನಿರ್ವಹಣೆಯನ್ನು ಅವಲಂಬಿಸಿದೆ. ಸಂಪೂರ್ಣ ಮತ್ತು ಸಮಗ್ರ ಬೆಳೆ ನಿರ್ವಹಣಾ ಯೋಜನೆಯನ್ನು ಅನುಷ್ಠಾನಗೊಳಿಸುವುದರಿಂದ ಸರಿಯಾದ ಬೆಳವಣಿಗೆ ಮತ್ತು ಚೈತನ್ಯವನ್ನು ಖಚಿತಪಡಿಸುವುದರೊಂದಿಗೆ ಬೇಸಾಯ ವೆಚ್ಚವನ್ನು ಕಡಿಮೆ ಮಾಡುತ್ತದೆ. ಇದಲ್ಲದೇ, ಬೆಳೆಯನ್ನು ವಿನಾಶಕಾರಿ ಕೀಟ ಮತ್ತು ರೋಗ ಹಾನಿಯಿಂದ ರಕ್ಷಿಸುತ್ತದೆ.

### ಮಣ್ಣಿನ ಆರೋಗ್ಯ ಮತ್ತು ಪೋಷಕಾಂಶ ನಿರ್ವಹಣೆ (INM)

- **ಸೂಕ್ಷ್ಮ ಪೋಷಕಾಂಶಗಳನ್ನು ಅತ್ಯುತ್ತಮವಾಗಿಸಿ:** ಬೆಳೆ ತಿರುಗುವಿಕೆ, ಸಾವಯವ ಗೊಬ್ಬರ ಮತ್ತು ಹೊದಿಕೆ ಬೆಳೆಗಳಿಗೆ ಆದ್ಯತೆ ನೀಡುವ ಮೂಲಕ ಮತ್ತು ಬಿತ್ತನೆ ಪೂರ್ವ ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ತರ್ಕಬದ್ಧ ರಾಸಾಯನಿಕ ಗೊಬ್ಬರವನ್ನು ಬಳಸುವ ಮೂಲಕ ಮಣ್ಣಿನ ಆರೋಗ್ಯವನ್ನು ಸುಧಾರಿಸಿ.

- **ಸೂಕ್ಷ್ಮ ಪೋಷಕಾಂಶಗಳನ್ನು ಅನ್ವಯಿಸಿ:** ಅಗತ್ಯವಿರುವಂತೆ ಉದ್ದೇಶಿತ ಸಿಂಪಡಣೆಗಳ ಮೂಲಕ ದ್ವಿತೀಯ ಮತ್ತು ಸೂಕ್ಷ್ಮ ಪೋಷಕಾಂಶಗಳ ಕೊರತೆಗಳನ್ನು (ಸತು, ಬೋರಾನ್, ಮ್ಯಾಂಗನೀಸ್ ಮತ್ತು ಮೆಗ್ನೀಸಿಯಮ್‌ನಂತಹ) ಪೂರ್ವಭಾವಿಯಾಗಿ ಪರಿಹರಿಸಿ.

### ರೋಗ ನಿರ್ವಹಣೆ (IDM)

- **ರೋಗ ತಡೆಗಟ್ಟುವ ಪದ್ಧತಿಗಳನ್ನು ನಿಯೋಜಿಸಿ:** ಮಣ್ಣಿನಿಂದ ಹರಡುವ ಮತ್ತು ಎಲೆಗಳಿಂದ ಹರಡುವ ರೋಗಕಾರಕಗಳ ನಿರ್ವಹಣೆಯನ್ನು ಸಮಗ್ರ ಕೃಷಿ ಪದ್ಧತಿಗಳ ಮೂಲಕ ಸಾಧಿಸಬೇಕು, ಇದರಲ್ಲಿ ಸರಿಯಾದ ಕ್ಷೇತ್ರ ನೈರ್ಮಲ್ಯ, ಜೈವಿಕ ಕೀಟನಾಶಕಗಳು ಮತ್ತು ಜೈವಿಕ ಗೊಬ್ಬರಗಳನ್ನು ಬೀಜ ಮತ್ತು ಮಣ್ಣಿನ ಉಪಚಾರಗಳಾಗಿ ಅನ್ವಯಿಸುವುದು, ಸಸ್ಯ ಆರೋಗ್ಯವನ್ನು ಹೆಚ್ಚಿಸಲು ಮತ್ತು ರೋಗದ ಸಂಭವವನ್ನು ನಿಗ್ರಹಿಸಲು ಸಹಾಯ ಮಾಡುತ್ತದೆ.
- **ಏಕಾಏಕಿ ರೋಗ ಪ್ರಸಾರ ನಿಯಂತ್ರಣ:** ಹೆಚ್ಚಿನ ಆರ್ದ್ರತೆಯ ಅವಧಿಯಲ್ಲಿ ನಿಯಮಿತ ಕ್ಷೇತ್ರ ಮೇಲ್ವಿಚಾರಣೆಯನ್ನು ಕೈಗೊಳ್ಳಬೇಕು ಮತ್ತು ಚಾಲ್ತಿಯಲ್ಲಿರುವ ಪರಿಸರ ಪರಿಸ್ಥಿತಿಗಳು ತ್ವರಿತ ರೋಗ ಬೆಳವಣಿಗೆ ಮತ್ತು ಹರಡುವಿಕೆಗೆ ಅನುಕೂಲಕರವಾದಾಗ ಮಾತ್ರ ಶಿಫಾರಸು ಮಾಡಲಾದ ಶಿಲೀಂಧ್ರನಾಶಕಗಳನ್ನು ವಿವೇಚನೆಯಿಂದ ಅನ್ವಯಿಸಬೇಕು.

### ಸಮಗ್ರ ಕೀಟ ನಿರ್ವಹಣೆ (IPM)

- ಕ್ಷೇತ್ರ ಶೋಧನೆ ನಡೆಸುವುದು: ಕಾಯಿಕೊರಕಗಳ ಜೊತೆಗೆ ರಸ ಹೀರುವ ಕೀಟಗಳನ್ನು (ಥ್ರಿಪ್ಸ್ ನುಸಿ , ಹೇನು, ಜಿಗಿ ಹುಳುಗಳು, ಮತ್ತು ಜೇಡ ಹುಳಗಳು) ನಿರೀಕ್ಷಣೆ ಮಾಡಲು ವಾರಕ್ಕೊಮ್ಮೆ ಕ್ಷೇತ್ರ ಶೋಧನೆ ಮಾಡಿ.
- ಜಿಗುಟು ಬಲೆ ಮತ್ತು ಜೈವಿಕ ಕೀಟನಾಶಕಗಳನ್ನು ಬಳಸಿ: ವಯಸ್ಕ ಪತಂಗಗಳ ಹಾರಾಟವನ್ನು ಪತ್ತೆಹಚ್ಚಲು ಹಾಗೂ ಮೊಟ್ಟೆ ಇಡುವ ಚಕ್ರಗಳನ್ನು ಊಹಿಸಲು ಋತುವಿನ ಆರಂಭದಲ್ಲಿ ಲಿಂಗಾಕರ್ಷಕ ಬಲೆಗಳನ್ನು ನೆಡಬೇಕು. ಪ್ರಾಥಮಿಕ ಪ್ರತಿಕ್ರಿಯೆಯಾಗಿ ಸಾವಯವ, ನೈಸರ್ಗಿಕ ಅಥವಾ ಸಸ್ಯ ಆಧಾರಿತ ಕೀಟನಾಶಕಗಳನ್ನು ಸಿಂಪಡಿಸಬೇಕು.
- ನೈಸರ್ಗಿಕ ಮಿತ್ರಕೀಟಗಳನ್ನು ಸಂರಕ್ಷಿಸಿ: ವ್ಯಾಪಕ ವ್ಯಾಪ್ತಿಯ ರಾಸಾಯನಿಕಗಳಿಗಿಂತ ನಿರ್ದಿಷ್ಟ ಕೀಟನಾಶಕಗಳನ್ನು ಆರಿಸುವ ಮೂಲಕ ಮಿತ್ರ ಕೀಟಗಳ ಸಂರಕ್ಷಣೆ ಮಾಡಬೇಕು.
- ರಾಸಾಯನಿಕ ಬಳಕೆ ನಿರ್ಬಂಧಿಸಿ: ಕೀಟಗಳ ಸಂಖ್ಯೆಯು ಆರ್ಥಿಕ ಗರಿಷ್ಟ ಮಿತಿಯನ್ನು ತಲುಪಿದಾಗ ಮಾತ್ರ, ಲೇಬಲ್-ಶಿಫಾರಸು ಮಾಡಿದ ರಾಸಾಯನಿಕ ಕೀಟನಾಶಕಗಳನ್ನು ಕೊನೆಯ ಉಪಾಯವಾಗಿ ಬಳಸಬೇಕು.

## ಬ. ನಿರ್ದಿಷ್ಟ ಸ್ಥಳಕ್ಕೆ ಸಂಬಂಧಿಸಿದ ಸಲಹೆ

| ಕರ್ನಾಟಕ | ಕಳೆದ ವಾರದಲ್ಲಿ ಬಿದ್ದ ಮಳೆಯ ವಿವರ (ಮಿ.ಮೀ) | | | | | | | IMDಯ ಪ್ರಕಾರ ಮಳೆಯ ಮುನ್ಸೂಚನೆ (ಮಿ.ಮೀ) | | | | |
|---|---|---|---|---|---|---|---|---|---|---|---|---|
| ತಿಂಗಳು | ಸೆಪ್ಟೆಂಬರ್ | | | | | | | | | | | |
| ದಿನಾಂಕ | 15 | 16 | 17 | 18 | 19 | 20 | 21 | 23 | 24 | 25 | 26 | 27 |
| ಧಾರವಾಡ | 0 | 0 | 0 | 0 | 0 | 0 | 0 | 2.7 | 10 | 2.9 | 2.2 | 1 |
| ಹಾವೇರಿ | 0 | 0 | 0 | 0 | 0 | 0 | 0 | 1.1 | 7.1 | 4.6 | 2.8 | 0.5 |
| ಮೈಸೂರು | 0 | 0 | 0 | 0 | 0 | 0 | 0 | 0.1 | 0 | 3.2 | 3.4 | 0.2 |

| ಮಳೆಯ ಮಾಹಿತಿಯ ಮಾದರಿ | | | | | | ಮಳೆಯ ಮಾಹಿತಿಯ ಮೂಲ: |
|---|---|---|---|---|---|---|
| ಮಳೆಯ ಪ್ರಮಾಣ (ಮಿ.ಮೀ) | 0.1-2.4 | 2.5-15.5 | 15.6-64.4 | 64.5-115.5 | 115.6-204.4 | http://nwp.imd.gov.in/bias/dist_fcst.htm |

**ಬೆಳೆಯ ಸ್ಥಿತಿ:**

ಧಾರವಾಡದಲ್ಲಿ, ಬೆಳೆಯು ಹೂಬಿಡುವ ಹಂತದಿಂದ ಕಾಯಿ ಕಟ್ಟುವ ಹಂತದವರೆಗೆ 85 ರಿಂದ 90 ದಿನಗಳ ಅವಧಿಯನ್ನು ಹೊಂದಿದೆ. ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಲ್ಲಲ್ಲಿ ಮಳೆಯಾಗಿದೆ. ಕಳೆ ನಿರ್ವಹಣೆಗಾಗಿ ಕೈಯಿಂದ ಕಳೆ ತೆಗೆಯುವುದು ಮತ್ತು ಅಂತರ ಬೇಸಾಯದ ಕ್ರಮಗಳನ್ನು ಕೈಗೊಳ್ಳಲಾಗಿದೆ; ಜೊತೆಗೆ ಕೀಟನಾಶಕಗಳು ಹಾಗೂ ಎಲೆಗಳ ಮೂಲಕ ಸಿಂಪಡಿಸುವ ದ್ರಾವಣಗಳ (ಫೋಲಿಯಾರ್ ಸ್ಪ್ರೇ) ಬಳಕೆಯನ್ನೂ ಮಾಡಲಾಗಿದೆ. ಕೆಲವು ಹೊಲಗಳಲ್ಲಿ ಕಳೆಗಳ ಬಾಧೆ ಕಂಡುಬಂದಿದೆ. ಥ್ರಿಪ್ಸ್ ಕೀಟಗಳ ಬಾಧೆ ಕಡಿಮೆ ಪ್ರಮಾಣದಲ್ಲಿದ್ದರೆ, ಎಲೆ ಜಿಗಿ ಹುಳು ಮತ್ತು ಮಿರಿಡ್ ತಿಗಣೆಗಳ ಬಾಧೆ ಕಡಿಮೆ ಹಾಗೂ ಮಧ್ಯಮ ಪ್ರಮಾಣದಲ್ಲಿ ಕಂಡುಬಂದಿದೆ. ಆಲ್ಟರ್ನೇರಿಯಾ ಎಲೆ ಅಂಗಮಾರಿ ರೋಗದ ಪ್ರಮಾಣವೂ ಕಡಿಮೆ ಹಾಗೂ ಮಧ್ಯಮ ಮಟ್ಟದಲ್ಲಿದೆ, ಆದರೆ ಕೆಲವು ಹೊಲಗಳಲ್ಲಿ ಸೊರಗು ರೋಗದ ಲಕ್ಷಣಗಳು ಕಡಿಮೆ ಪ್ರಮಾಣದಲ್ಲಿ ವರದಿಯಾಗಿವೆ.

ರಾಯಚೂರಿನಲ್ಲಿ, ಬಿತ್ತನೆ ಮಾಡಿದ ಬೆಳೆಯು 87 ದಿನಗಳದ್ದಾಗಿದ್ದು, ಹೂಬಿಡುವ ಹಂತಕ್ಕೆ ತಲುಪಿದೆ. ಮಳೆಯ ಅಭಾವದಿಂದಾಗಿ ಹತ್ತಿ ಗಿಡಗಳು ವಿವಿಧ ಹಂತದಲ್ಲಿ ಒಣಗುತ್ತಿವೆ; ಆದಾಗ್ಯೂ, ಆರಂಭದಲ್ಲಿ ಬಿತ್ತನೆ ಮಾಡಿದ ಬೆಳೆಯು ಬರ ಪರಿಸ್ಥಿತಿಯನ್ನು ತಡೆದುಕೊಳ್ಳುತ್ತಿದೆ. ಬೆಳೆಗಳ ನಡುವಿನ ಅಂತರ-ಬೇಸಾಯ ಚಟುವಟಿಕೆಗಳನ್ನು ಕೈಗೊಳ್ಳುವುದರ ಜೊತೆಗೆ, ರಸ ಹೀರುವ ಕೀಟಗಳ ನಿಯಂತ್ರಣಕ್ಕಾಗಿ ಕೀಟನಾಶಕ ಸಿಂಪರಣೆಯನ್ನು ಸಹ ಮಾಡಲಾಗುತ್ತಿದೆ. ಕ್ಷೇತ್ರ ವೀಕ್ಷಣೆ ಮಾಡಿದಾಗ ಕಳೆಗಳು, ಕೀಟಗಳು ಮತ್ತು ರೋಗಗಳ ಬಾಧೆ ವಿವಿಧ ಹಂತಗಳಲ್ಲಿ ಕಂಡು ಬಂದವು. ತದನುಸಾರ, ಶಿಫಾರಸು ಮಾಡಲಾದ ಬೆಳೆ ಸಂರಕ್ಷಣಾ ಪದ್ಧತಿಗಳನ್ನು ಅನುಸರಿಸಿ, ಸಕಾಲಿಕ ಮತ್ತು ಅಗತ್ಯಕ್ಕೆ ತಕ್ಕಂತೆ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳಲು ರೈತರಿಗೆ ಸೂಚಿಸಲಾಯಿತು.

ಚಾಮರಾಜನಗರದಲ್ಲಿ, ಹತ್ತಿ ಬೆಳೆಯು 114 ರಿಂದ 129 ದಿನಗಳ ಅವಧಿಯಲ್ಲಿ ಕಾಯಿ ಒಡೆಯುವ ಹಂತದಿಂದ ಹತ್ತಿ ಬಿಡಿಸುವ ಹಂತದಲ್ಲಿದೆ. ಸದ್ಯಕ್ಕೆ ಸಿಂಪರಣೆ ಮತ್ತು ಹತ್ತಿ ಬಿಡಿಸುವ ಕಾರ್ಯಗಳು ಪ್ರಗತಿಯಲ್ಲಿವೆ. ಎಲೆ ಜಿಗಿ ಹುಳುಗಳ ಬಾಧೆ (ಪ್ರತಿ 3 ಎಲೆಗಳಿಗೆ 02-04), ಹೇನುಗಳ ಬಾಧೆ (ಪ್ರತಿ 3 ಎಲೆಗಳಿಗೆ 20-30) ಹಾಗೂ ಗುಲಾಬಿ ಕಾಯಿ ಕೊರಕದ ಬಾಧೆ ಶೇ. 5-10 ಕ್ಕಿಂತ ಕಡಿಮೆ ಪ್ರಮಾಣದಲ್ಲಿರುವುದು ಕಂಡುಬಂದಿದೆ. ಇಲ್ಲಿಯವರೆಗೆ ಯಾವುದೇ ರೋಗಗಳ ಬಾಧೆ ಕಂಡುಬಂದಿಲ್ಲ.

**ಸಲಹೆ:**

ಧಾರವಾಡದಲ್ಲಿ, ಕಳೆ ನಿರ್ವಹಣೆಗಾಗಿ ರೈತರು ಕೈಯಿಂದ ಕಳೆ ತೆಗೆಯುವುದು ಮತ್ತು ಅಂತರ ಬೇಸಾಯದ

ಕ್ರಮಗಳನ್ನು ಕೈಗೊಳ್ಳಲು ಸಲಹೆ ನೀಡಲಾಗಿದೆ. ಮಣ್ಣಿನಲ್ಲಿ ತೇವಾಂಶವಿದ್ದು ಕೈಯಿಂದ ಕಳೆ ತೆಗೆಯಲು ಸಾಧ್ಯವಾಗದಿದ್ದಲ್ಲಿ, ಹುಲ್ಲು ಜಾತಿಯ ಕಳೆಗಳಿದ್ದರೆ 'ಕ್ವಿಜಾಲೋಫಾಪ್ ಈಥೈಲ್ 5% ಇಸಿ' ಅನ್ನು ಪ್ರತಿ ಲೀಟರ್ ನೀರಿಗೆ 2 ಮಿ.ಲೀ.ನಂತೆ; ಅಗಲ ಎಲೆಯ ಕಳೆಗಳಿದ್ದರೆ 'ಪೈರಿಥಿಯೋಬಾಕ್ ಸೋಡಿಯಂ 10% ಇಸಿ' ಅನ್ನು ಪ್ರತಿ ಲೀಟರ್ ನೀರಿಗೆ 1.5 ಮಿ.ಲೀ.ನಂತೆ; ಅಥವಾ ಎರಡೂ ಬಗೆಯ ಕಳೆಗಳನ್ನು ನಿಯಂತ್ರಿಸಲು 'ಪೈರಿಥಿಯೋಬಾಕ್ ಸೋಡಿಯಂ 6% + ಕ್ವಿಜಾಲೋಫಾಪ್ ಈಥೈಲ್ 4% ಎಂಇಸಿ' ಅನ್ನು ಪ್ರತಿ ಲೀಟರ್ ನೀರಿಗೆ 2-2.5 ಮಿ.ಲೀ.ನಂತೆ ಸಿಂಪಡಿಸಿ. ಆಕರ್ಷಕ ಬೆಳೆಯಾಗಿ ಬೆಳೆದಿರುವ ಬೆಂಡೆಯಿಂದ ಮೂತಿ ಹುಳುಗಳನ್ನು ಕೈಯಿಂದ ಆರಿಸಿ ನಾಶಪಡಿಸಿ. ರಂಜಕ ಮತ್ತು ಪೊಟ್ಯಾಶ್ ಗೊಬ್ಬರಗಳನ್ನು 'ರಿಂಗ್ ವಿಧಾನ'ದಲ್ಲಿ (ಗಿಡದ ಸುತ್ತಲೂ ಉಂಗುರಾಕಾರದಲ್ಲಿ) ಹಾಕಿ. 75 ದಿನಗಳ ಬೆಳೆಯ ಮೇಲೆ 'ಸ್ಯಾಲಿಸಿಲಿಕ್ ಆಮ್ಲ'ವನ್ನು 100 ಪಿಪಿಎಂ ಸಾಂದ್ರತೆಯಲ್ಲಿ ಸಿಂಪಡಿಸಿ. ರಸ ಹೀರುವ ಕೀಟಗಳ ನಿರ್ವಹಣೆಗೆ ಬೇವಿನ ಆಧಾರಿತ ಕೀಟನಾಶಕವನ್ನು ಪ್ರತಿ ಲೀಟರ್ ನೀರಿಗೆ 5.0 ಮಿ.ಲೀ.ನಂತೆ ಸಿಂಪಡಿಸಿ. ಬಿತ್ತನೆಯಾದ 60 ದಿನಗಳ ನಂತರ, ರಸ ಹೀರುವ ಕೀಟಗಳ ಹಾವಳಿ ಆರ್ಥಿಕ ಹಾನಿಯ ಮಟ್ಟವನ್ನು ಮೀರಿದರೆ, 'ಫ್ಲೋನಿಕಮಿಡ್ 50 ಡಬ್ಲ್ಯುಜಿ' ಅನ್ನು ಪ್ರತಿ ಲೀಟರ್ ನೀರಿಗೆ 0.4 ಗ್ರಾಂನಂತೆ ಅಥವಾ 'ಡಯಾಫೆಂಥಿಯುರಾನ್ 50 ಡಬ್ಲ್ಯುಪಿ' ಅನ್ನು ಪ್ರತಿ ಲೀಟರ್ ನೀರಿಗೆ 1.2 ಗ್ರಾಂನಂತೆ ಸಿಂಪಡಿಸಿ. ಗುಲಾಬಿ ಕಾಯಿ ಕೊರೆಯುವ ಹುಳದ ಚಟುವಟಿಕೆಯನ್ನು ಗಮನಿಸಲು ಎಕರೆಗೆ 2 ರಂತೆ ಲಿಂಗಾಕರ್ಷಕ (ಫೆರೋಮೋನ್) ಬಲೆಗಳನ್ನು ಅಳವಡಿಸಿ. ಗುಲಾಬಿ ಕಾಯಿ ಕೊರಕದ ಮರಿಹುಳುಗಳಿರುವ 'ರೋಸೆಟ್' ಹೂವುಗಳನ್ನು (ಅರಳದೆ ಮುಚ್ಚಿಕೊಂಡಿರುವ ಹೂವುಗಳು) ನಾಶಪಡಿಸಿ. ದಟ್ಟ ಸಾಂದ್ರತೆಯ ಬಿತ್ತನೆ ಪದ್ಧತಿ (90 x 15 ಸೆಂ.ಮೀ.) ಅಥವಾ ಕಡಿಮೆ ಅಂತರದ (90 x 30 ಸೆಂ.ಮೀ.) ಹತ್ತಿ ಬೆಳೆ ಬೆಳೆಯುತ್ತಿರುವ ರೈತರು, ಬೆಳೆ 40-45 ದಿನಗಳಾಗಿದ್ದಾಗ ಅಥವಾ ಮೊಗ್ಗು ಬರುವ ಹಂತದಲ್ಲಿ ಸಸ್ಯ ಬೆಳವಣಿಗೆ ನಿಯಂತ್ರಕವಾದ (PGR) 'ಮೆಪಿಕ್ವಾಟ್ ಕ್ಲೋರೈಡ್ 5% ಎಎಸ್' ಅನ್ನು ಪ್ರತಿ ಲೀಟರ್ ನೀರಿಗೆ 1 ಮಿ.ಲೀ.ನಂತೆ ಸಿಂಪಡಿಸಬೇಕು ಮತ್ತು 15-20 ದಿನಗಳ ನಂತರ ಅದೇ ಪ್ರಮಾಣದಲ್ಲಿ ಎರಡನೇ ಬಾರಿ ಸಿಂಪಡಿಸಬೇಕು. ದೀರ್ಘಕಾಲದ ಒಣ ಹವೆಯಿಂದಾಗಿ ಬೆಳೆ ನೀರಿನ ಕೊರತೆಯನ್ನು ಎದುರಿಸುತ್ತಿದ್ದರೆ, 'ಮೆಪಿಕ್ವಾಟ್ ಕ್ಲೋರೈಡ್' ಸಿಂಪಡಿಸುವುದನ್ನು ತಪ್ಪಿಸಿ. ಬದಲಾಗಿ, 200 ಲೀಟರ್ ನೀರಿನಲ್ಲಿ 2 ಕೆ.ಜಿ. '13:00:45' ರಸಗೊಬ್ಬರವನ್ನು ಬೆರೆಸಿ ಎಲೆಗಳ ಮೇಲೆ ಸಿಂಪಡಿಸಿ. ಹತ್ತಿ ಗಿಡದಲ್ಲಿ ಮೊಗ್ಗುಗಳು ಉದುರುವುದು ಕಂಡುಬಂದರೆ, ಉದುರುವುದನ್ನು ತಡೆಯಲು 10 ಲೀಟರ್ ನೀರಿಗೆ 4 ಮಿ.ಲೀ. ಎನ್‌ಎಎ 4.5 SL ಬೆರೆಸಿ ಸಿಂಪಡಿಸಿ. ಆಲ್ಟರ್ನೇರಿಯಾ ಅಂಗಮಾರಿ, ಎಲೆ ಚುಕ್ಕೆ ರೋಗ ಮತ್ತು ಶಿಲೀಂಧ್ರದಿಂದ ಉಂಟಾಗುವ ಕಾಯಿ ಕೊಳೆತ ರೋಗಗಳ ನಿರ್ವಹಣೆಗೆ, 10 ಲೀಟರ್ ನೀರಿಗೆ ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಬೆರೆಸಿ ಸಿಂಪಡಿಸಲು ಶಿಫಾರಸು ಮಾಡಲಾಗಿದೆ: (ಅಝೋಕ್ಸಿಸ್ಟ್ರೋಬಿನ್ 18.2% w/w + ಡಿಫೆನೋಕೊನಜೋಲ್ 11.4% w/w SC) - 10 ಮಿ.ಲೀ., ಅಥವಾ (ಫ್ಲ್ಯುಕ್ಸಾಪಿರೋಕ್ಸಾಡ್ 167 g/l + ಪಿರಾಕ್ಲೋಸ್ಟ್ರೋಬಿನ್ 333 g/l SC) - 6 ಮಿ.ಲೀ., ಅಥವಾ ಥಿಯೋಫನೇಟ್ ಮೀಥೈಲ್ 70% WP - 15-20 ಗ್ರಾಂ, ಅಥವಾ ಪ್ರೊಪಿಕೋನಾಜೋಲ್ 25 EC - 10 ಮಿ.ಲೀ. ಬೇರು ಕೊಳೆತ ಮತ್ತು ಬಾಡುವ ರೋಗ ಬಾಧಿತ ಪ್ರದೇಶಗಳಲ್ಲಿ, ನಾಪ್‌ಸ್ಯಾಕ್ ಸ್ಪ್ರೇಯರ್‌ನ ನಳಿಕೆಯನ್ನು ತೆರೆದಿಟ್ಟು, ರೋಗಲಕ್ಷಣವಿರುವ ಹಾಗೂ ಆರೋಗ್ಯಕರ ಗಿಡಗಳ ಸಾಲುಗಳಿಗೆ ಈ : 20 ಲೀಟರ್ ನೀರಿಗೆ 100 ಗ್ರಾಂ ಟ್ರೈಕೋಡರ್ಮ ಹರ್ಜಿಯಾನಂ ಅಥವಾ ಟ್ರೈಕೋಡರ್ಮ ವಿರಿಡೆ ಮಿಶ್ರಣ, ಅಥವಾ 20 ಲೀಟರ್ ನೀರಿಗೆ 24 ಗ್ರಾಂ ಕಾರ್ಬೆನ್ಡಜಿಮ್ 50 WP ದ್ರಾವಣವನ್ನು ಸುರಿಯುವಂತೆ ಸೂಚಿಸಲಾಗಿದೆ.

ರಾಯಚೂರಿನಲ್ಲಿ, ಭೂಮಿ ಒಣಗುವುದನ್ನು ತಡೆಯಲು ರೈತರು ಕಳೆ ತೆಗೆಯುವಿಕೆ ಮತ್ತು ಅಂತರ ಬೇಸಾಯವನ್ನು ಆದ್ಯತೆಯ ಮೇರೆಗೆ ಕೈಗೊಳ್ಳುವಂತೆ ಸಲಹೆ ನೀಡಲಾಗಿದೆ. ಮಣ್ಣಿನಲ್ಲಿ ತೇವಾಂಶವಿದ್ದು ಕೈಯಿಂದ ಕಳೆ ತೆಗೆಯಲು ಸಾಧ್ಯವಾಗದಿದ್ದಲ್ಲಿ, ಹುಲ್ಲು ಜಾತಿಯ ಕಳೆಗಳಿದ್ದರೆ 'ಕ್ವಿಜಾಲೋಫಾಪ್ ಈಥೈಲ್ 5% EC' (ಪ್ರತಿ ಲೀಟರ್ ನೀರಿಗೆ 2 ಮಿ.ಲೀ.) ಅಥವಾ ಅಗಲ ಎಲೆಯ ಕಳೆಗಳಿದ್ದರೆ 'ಪೈರಿಥಿಯೋಬಾಕ್ ಸೋಡಿಯಂ 10% EC' (ಪ್ರತಿ ಲೀಟರ್ ನೀರಿಗೆ 1.5 ಮಿ.ಲೀ.) ಸಿಂಪಡಿಸಿ. ಬೆಳೆಯು 25-30 ದಿನಗಳ ಅವಧಿಯಲ್ಲಿದ್ದಾಗ ಹುಲ್ಲು ಮತ್ತು ಅಗಲ ಎಲೆಯ ಕಳೆಗಳೆರಡನ್ನೂ ನಿಯಂತ್ರಿಸಲು 'ಪೈರಿಥಿಯೋಬಾಕ್ ಸೋಡಿಯಂ 6% + ಕ್ವಿಜಾಲೋಫಾಪ್ ಈಥೈಲ್ 4% MEC' (ಪ್ರತಿ ಲೀಟರ್ ನೀರಿಗೆ 2-

2.5 ಮಿ.ಲೀ.) ಅನ್ನು ಬಳಸಬಹುದು. ಹಾನಿಯ ಮಿತಿ ಮಟ್ಟವನ್ನು (ETL) ಮೀರಿದ ರಸ ಹೀರುವ ಕೀಟಗಳ ನಿಯಂತ್ರಣಕ್ಕಾಗಿ ಶಿಫಾರಸು ಮಾಡಲಾದ 'ಫ್ಲೋನಿಕಾಮಿಡ್ 50% WG' (10 ಲೀಟರ್ ನೀರಿಗೆ 4 ಗ್ರಾಂ) ಅನ್ನು ಸಿಂಪಡಿಸಿ. ಹಿಟ್ಟು ತಿಗಣೆ ಬಾಧೆಯನ್ನು ನಿಯಂತ್ರಿಸಲು ಪ್ರತಿ ಲೀಟರ್ ನೀರಿಗೆ 2.5 ಮಿ.ಲೀ. 'ಪ್ರೊಫೆನೋಫಾಸ್ 50 EC' ಅಥವಾ 0.3 ಮಿ.ಲೀ. 'ಇಮಿಡಾಕ್ಲೋಪ್ರಿಡ್ 17.8 SL' ಅನ್ನು ಸಿಂಪಡಿಸಿ. ಹೆಚ್ಚಿನ ಸಾಂದ್ರತೆಯ ನಾಟಿ ಪದ್ಧತಿ (90x15 ಸೆಂ.ಮೀ.) ಅಥವಾ ಕಡಿಮೆ ಅಂತರದ (90x30 ಸೆಂ.ಮೀ.) ಹತ್ತಿ ಬೆಳೆ ಬೆಳೆಯುತ್ತಿರುವ ರೈತರು, ಬೆಳೆ 40-45 ದಿನಗಳಾಗಿದ್ದಾಗ ಅಥವಾ ಮೊಗ್ಗು ಬರುವ ಹಂತದಲ್ಲಿ ಸಸ್ಯ ಬೆಳವಣಿಗೆ ನಿಯಂತ್ರಕ (PGR) 'ಮೆಪಿಕ್ವಾಟ್ ಕ್ಲೋರೈಡ್ 5% AS' ಅನ್ನು (ಪ್ರತಿ ಲೀಟರ್ ನೀರಿಗೆ 1 ಮಿ.ಲೀ.) ಸಿಂಪಡಿಸಬೇಕು ಮತ್ತು 15-20 ದಿನಗಳ ನಂತರ ಎರಡನೇ ಬಾರಿ (ಪ್ರತಿ ಲೀಟರ್ ನೀರಿಗೆ 1.0 ಮಿ.ಲೀ.) ಸಿಂಪಡಿಸಬೇಕು. ದೀರ್ಘಕಾಲದ ಒಣ ಹವಾಮಾನದಿಂದಾಗಿ ಬೆಳೆಯು ನೀರಿನ ಕೊರತೆಯನ್ನು ಎದುರಿಸುತ್ತಿದ್ದರೆ, 'ಮೆಪಿಕ್ವಾಟ್ ಕ್ಲೋರೈಡ್' ಸಿಂಪಡಣೆಯನ್ನು ತಪ್ಪಿಸಿ. ಬದಲಾಗಿ, 200 ಲೀಟರ್ ನೀರಿನಲ್ಲಿ 2 ಕೆ.ಜಿ. '13:00:45' ರಸಗೊಬ್ಬರವನ್ನು ಬೆರೆಸಿ ಎಲೆಗಳ ಮೇಲೆ ಸಿಂಪಡಿಸಿ. ಹತ್ತಿಯ ಮೊಗ್ಗುಗಳು ಮತ್ತು ಹೂವುಗಳು ಉದುರುವುದು ಕಂಡುಬಂದರೆ, ಅವು ಸ್ವಾಭಾವಿಕವಾಗಿ ಉದುರುವುದನ್ನು ತಡೆಯಲು 'NAA' ಅನ್ನು (10 ಲೀಟರ್ ನೀರಿಗೆ 4 ಮಿ.ಲೀ.) ಎಲೆಗಳ ಮೇಲೆ ಸಿಂಪಡಿಸಿ. ಹಿಟ್ಟು ತಿಗಣೆ ಬಾಧೆಯನ್ನು ನಿಯಂತ್ರಿಸಲು ಪ್ರತಿ ಟ್ಯಾಂಕ್‌ಗೆ 'ಪ್ರೊಫೆನೋಫಾಸ್' (2 ಮಿ.ಲೀ.) + 'ಇಮಿಡಾಕ್ಲೋಪ್ರಿಡ್' (0.5 ಮಿ.ಲೀ.) + 2 ಶಾಂಪೂ ಪಾಕೆಟ್‌ಗಳನ್ನು ಸೇರಿಸಿ ಸಿಂಪಡಿಸಿ.

ಚಾಮರಾಜನಗರದಲ್ಲಿ, ರಸ ಹೀರುವ ಕೀಟಗಳ ಹತೋಟಿಗೆ ಹಾಗೂ ಅವುಗಳ ಮೇಲೆ ನಿಗಾ ವಹಿಸಲು, ರೈತರು ಪ್ರತಿ ಎಕರೆಗೆ 8-12 ರಂತೆ ಹಳದಿ ಅಂಟು ಬಲೆಗಳನ್ನು ಮತ್ತು ಲಿಂಗಾಕರ್ಷಕ (ಫೆರೋಮೋನ್) ಬಲೆಗಳನ್ನು ಅಳವಡಿಸಿಕೊಳ್ಳಬೇಕು ಹಾಗೂ ಫೆರೋಮೋನ್ ಬಲೆಗಳ ಆಕರ್ಷಕಗಳನ್ನು (ಲೂರ್) ಪ್ರತಿ 15 ದಿನಗಳಿಗೊಮ್ಮೆ ಬದಲಾಯಿಸಬೇಕು. ರಸ ಹೀರುವ ಕೀಟಗಳ ಬಾಧೆಯು ಆರ್ಥಿಕ ಹಾನಿಯ ಮಿತಿಗಿಂತ ಹೆಚ್ಚಾಗಿದ್ದಲ್ಲಿ, ಪ್ರತಿ ಲೀಟರ್ ನೀರಿಗೆ 0.4 ಮಿ.ಲೀ. ಫ್ಲೋನಿಕಮಿಡ್ ಅಥವಾ 0.3 ಗ್ರಾಂ ಡಿನೋಟೆಫುರಾನ್ ಅಥವಾ 0.5 ಮಿ.ಲೀ. ಇಮಿಡಾಕ್ಲೋಪ್ರಿಡ್ 17.8 SL ಅನ್ನು ಬೆರೆಸಿ ಸಿಂಪಡಿಸಬೇಕು. ಹೂವುಗಳು ಅಥವಾ ಕಾಯಿಗಳಲ್ಲಿ ಗುಲಾಬಿ ಕಾಯಿ ಕೊರಕದ ಬಾಧೆಯು ಶೇಕಡಾ 5 ಕ್ಕಿಂತ ಹೆಚ್ಚಾಗಿದ್ದರೆ, ಪ್ರತಿ ಎಕರೆಗೆ 500 ಮಿ.ಲೀ. ಪ್ರೊಫೆನೋಫಾಸ್ 50 EC ಅಥವಾ 100 ಗ್ರಾಂ ಎಮಾಮೆಕ್ಟಿನ್ ಬೆಂಜೊಯೇಟ್ 5SG ಅಥವಾ 200 ಮಿ.ಲೀ. ಇಂಡೋಕ್ಸಾಕಾರ್ಬ್ 15 EC ಅನ್ನು ಸಿಂಪಡಿಸಬೇಕು. ಬೆಳೆಯು 120 ದಿನಗಳಿಗಿಂತ ಹೆಚ್ಚು ಅವಧಿಯದ್ದಾಗಿದ್ದು, ಗುಲಾಬಿ ಕಾಯಿ ಕೊರಕದ ಬಾಧೆಯು ಆರ್ಥಿಕ ಹಾನಿಯ ಮಿತಿಗಿಂತ ಹೆಚ್ಚಾಗಿದ್ದರೆ, ಪ್ರತಿ 10 ಲೀಟರ್ ನೀರಿಗೆ 10-15 ಮಿ.ಲೀ. ಸೈಪರ್‌ಮೆಥ್ರಿನ್ 10% EC ಅಥವಾ 10 ಮಿ.ಲೀ. ಡೆಲ್ಟಾಮೆಥ್ರಿನ್ 2.8 EC ಅಥವಾ 10 ಮಿ.ಲೀ. ಫೆನ್‌ಪ್ರೊಪಾಥ್ರಿನ್ 10% EC ಅನ್ನು ಬೆರೆಸಿ ಸಿಂಪಡಿಸಬೇಕು.

***ಭಾ. ಕೃ. ಅ. ಪ. – ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ***

***ಕನ್ನಡ ಅನುವಾದ***

***ಡಾ. ನೀಲಕಂಠ ಸ. ಹಿರೇಮನಿ***